# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ದಿನಾಂ[illegible]5.01.2019 ರಂದು ಬೆಳಿಗ್ಗೆ 11.00 ಗಂಟೆಗೆ ವಾರ್ಡ್ ನಂ. 187 ಪುಟ್ಟೇನಹಳ್ಳಿಯ [illegible]ಎಂಪಿ ಸದಸ್ಯರ ಅಧ್ಯಕ್ಷತೆಯಲ್ಲಿ ಹಾಗೂ ವಾರ್ಡ್ ಸಮಿತಿ ಸದಸ್ಯರ ಉಪಸ್ಥಿತಿಯಲ್ಲಿ ನಡೆದ ಸಭೆಯ ನಡವಳಿಗಳು.

ಉಪಸ್ಥಿತಿ: ಸಭೆಯಲ್ಲಿ ಹಾಜರಿದ್ದ ವಾರ್ಡ್ ಪಾಲಿಕೆ ಸದಸ್ಯರು, ವಾರ್ಡ್ ಸಮಿತಿ ಸದಸ್ಯರು ಮತ್ತು ಅಧಿಕಾರಿಗಳು.

ಹಾಜರಿದ್ದ ಸಮಿತಿ ಸದಸ್ಯರು

1. ಶ್ರೀಮತಿ ಆರ್ ಪ್ರಭಾವತಿ ರಮೇಶ್
   ವಾರ್ಡ್ ನಂ. 187 ಸದಸ್ಯರು ಮತ್ತು ವಾರ್ಡ್ ಸಮಿತಿ ಅಧ್ಯಕ್ಷರು.
2. ಶ್ರೀ.ಕೆ.ದೇವೆಗೌಡ,
   ಸಹಾಯಕ ಅಭಿಯಂತರರು, ಕಾರ್ಯದರ್ಶಿ ಹಾಗೂ ಸಂಚಾಲಕರು
3. ಶ್ರೀಮತಿ ಆಂಜಿನಮ್ಮ , ಸಮಿತಿ ಸದಸ್ಯರು,
4. ಶ್ರೀಮತಿ ಮಂಜುಳ. ಸಮಿತಿ ಸದಸ್ಯರು,
5. ಶ್ರೀಮತಿ ತನುಜ. ಸಮಿತಿ ಸದಸ್ಯರು,
6. ಶ್ರೀಮತಿ ಲಕ್ಷ್ಮೀ ಕೆ. ಸಮಿತಿ ಸದಸ್ಯರು,
7. ಶ್ರೀಮತಿ ಅನಿತ. ಸಮಿತಿ ಸದಸ್ಯರು,
8. ಶ್ರೀ ಸತೀಶ್ ಐತಾಳ್. ಸಮಿತಿ ಸದಸ್ಯರು,
9. ಶ್ರೀ ದೇವಿ. ಸಮಿತಿ ಸದಸ್ಯರು,
10. ಶ್ರೀ ಎಲ್.ರಮೇಶ್ . ಸಮಿತಿ ಸದಸ್ಯರು,
11. ಶ್ರೀ ರವಿ ಸಮಿತಿ ಸದಸ್ಯರು,
12. ಶ್ರೀ ನರಸಿಂಹ (ಬಾಬು) ಸಮಿತಿ ಸದಸ್ಯರು,

ವಾರ್ಡ್ ಸಮಿತಿ ಸಭೆಗೆ ಹಾಜರಾಗಿದ್ದ ಸಮಿತಿಯ ಅಧ್ಯಕ್ಷರು, ಸದಸ್ಯರನ್ನು ಮತ್ತು ಭಾಗವಹಿಸಿದ ಸಾರ್ವಜನಿಕರುಗಳಿಗೆ ಕಾರ್ಯದರ್ಶಿ ಮತ್ತು ಸಂಚಾಲಕರು ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು. ಈ ಹಿಂದಿನ ಸಭೆಯಲ್ಲಿನ ನಡವಳಿಗಳನ್ನು ಹಾಗೂ ತೀರ್ಮಾನಗಳನ್ನು ಮತ್ತೊಮ್ಮೆ ಸಭೆಯಲ್ಲಿ ತಿಳಿಸಲಾಯಿತು. ಹಾಗೂ ಈಗಾಗಲೇ ಸಭಾ ಸೂಚನಾ ಪತ್ರದಲ್ಲಿ ತಿಳಿಸಿದ ವಿಷಯಗಳಾದ.

6. ವಾರ್ಡ್ ವ್ಯಾಪ್ತಿಯಲ್ಲಿ ನಾಮಫಲಕಗಳನ್ನು ಅಳವಡಿಸುವ / ಗುರುತಿಸುವ ಬಗ್ಗೆ.
7. ಪುಟ್ಟೇನಹಳ್ಳಿ ವಾರ್ಡ್ ವ್ಯಾಪ್ತಿಯಲ್ಲಿ ಬರುವ ಪುಟ್ಟೇನಹಳ್ಳಿ ಬ್ಯಾಂಕ್ ಆಫ್ ಬರೋಡಾ, ಪುಟ್ಟೇನಹಳ್ಳಿ ಪಾಳ್ಯ, ಪಾಂಡುರಂಗ ನಗರ ಮತ್ತು ವಿವಿಧ ಪ್ರದೇಶಗಳಲ್ಲಿ ಘನ ತ್ಯಾಜ್ಯ ವಿಲೇವಾರಿ ಮಾಡುವ ಬಗ್ಗೆ ಮತ್ತು ಪೌರಕಾರ್ಮಿಕರನ್ನು ತೆಗೆದಿರುವ ಬಗ್ಗೆ.



Scanned by CamScanner

8. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಮನೆಗಳಿಗೆ ಬರುತ್ತಿರುವ ನೀರಿಗೆ ಬಿಲ್ ಮೊತ್ತವನ್ನು ಜಾಸ್ತಿ ಹಾಕುತ್ತಿರುವ ಬಗ್ಗೆ,

ಈ ಮೇಲ್ಕಂಡ ವಿಷಯಗಳ ಬಗ್ಗೆ ಕೂಲಂಕುಶವಾಗಿ ಚರ್ಚಿಸಲಾಗಿ ಈ ಕೆಳಕಂಡ ತೀರ್ಮಾನಗಳನ್ನು ಕೈಗೊಳ್ಳಲಾಗಿದೆ.

| | |
|---|---|
| ವಿಷಯ ಸಂಖ್ಯೆ :- 6 ರ ನಿರ್ಣಯ | ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನಾಮಫಲಕಗಳನ್ನು ಅಳವಡಿಸಲು ಅಯ್ಯವ್ಯಯ ಕಾರ್ಯಕ್ರಮ ಅಥವಾ ವಿಶೇಷ ಅನುದಾನದಡಿಯಲ್ಲಿ ಕಾಮಗಾರಿಯನ್ನು ಕೈಗೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು. |
| ವಿಷಯ ಸಂಖ್ಯೆ :- 7 ರ ನಿರ್ಣಯ | ಸದರಿ ವಿಷಯಕ್ಕೆ ಸಂಬಂಧಿಸಿದಂತೆ ವಾರ್ಡ್ ಕಮಿಟಿಯ ಅಧ್ಯಕ್ಷರು ಮತ್ತು ಜಂಟಿ ಆಯುಕ್ತರು ಸಭೆ ನಡೆಸಿ ನಿರ್ಣಯವನ್ನು ತೆಗೆದುಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು. |
| ವಿಷಯ ಸಂಖ್ಯೆ :- 8 ರ ನಿರ್ಣಯ | ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಅನಿವಾರ್ಯ ಕಾರಣಗಳಿಂದ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಅಧಿಕಾರಿಗಳ ಗೈರು ಹಾಜರಾಗಿರುವುದರಿಂದ ಮುಂದಿನ ಸಭೆಯಲ್ಲಿ ಈ ಬಗ್ಗೆ ಚರ್ಚಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. |

ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು .

ಶ್ರೀಮತಿ ಅನಿತಾ ವಾರ್ಡ್ ಸಮಿತಿ ಸದಸ್ಯರು. ರವರು ಮಾತನಾಡುತ್ತಾ ಶಾಮಣ್ಣ ಗಾರ್ಡನ ಸುತ್ತಾಮುತ್ತ ಒಳಚರಂಡಿ ವ್ಯವಸ್ಥೆಯನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಸರಿಯಾದ ರೀತಿಯಲ್ಲಿ ಮುಂದುವರೆಸಲು ಕೋರಿರುತ್ತಾರೆ.

ಶ್ರೀಮತಿ ಆಂಜಿನಮ್ಮ ವಾರ್ಡ್ ಸಮಿತಿ ಸದಸ್ಯರು. ರವರು ಮಾತನಾಡುತ್ತಾ ವಿನಾಯಕ ನಗರ ಹಾಗೂ ಸುತ್ತಮುತ್ತಲಿನ ರಸ್ತೆಗಳು ಚಿಕ್ಕ ಚಿಕ್ಕ ರಸ್ತೆಯಾಗಿದ್ದು, ಸದರಿ ರಸ್ತೆಗಳಲ್ಲಿ ವಾಹನ ಸಾವರಾರು ವಾಹನಗಳನ್ನು ರಸ್ತೆಯಲ್ಲಿಯೇ ನಿಲ್ಲಿಸುತ್ತಿರುವುದರಿಂದ ಸಾರ್ವಜನಿಕರಿ ತೊಂದರೆಯಾಗುತ್ತಿರುತ್ತದೆ. ಹಾಗೂ ಪಾದಚಾರಿ ಮಾರ್ಗದಲ್ಲಿ ಒಡಾಡಲು ಅಲ್ಲಿನ ವಾಣಿಜ್ಯ ಕಟ್ಟಡಗಳಿಗೆ ತಿಳಿಸಲು ಕೋರಿರುತ್ತಾರೆ.

ಶ್ರೀಮತಿ ತುನುಜ ವಾರ್ಡ್ ಸಮಿತಿ ಸದಸ್ಯರು. ರವರು ಮಾತನಾಡುತ್ತಾ ಬ್ಯಾಂಕ್ ಆಫ್ ಬರೋಡಾ ಕಾಲೋನಿಯ ರಸ್ತೆಗಳಲ್ಲಿ ಚರಂಡಿ ಅಭಿವೃದ್ಧಿ ಮತ್ತು ರಸ್ತೆಯನ್ನು ಡಾಂಬರೀಕರಣ ಮಾಡಲು ಮತ್ತೊಮ್ಮೆ ಕೋರಿರುತ್ತಾರೆ.

ಈ ಮೇಲ್ಕಂಡ ಎಲ್ಲಾ ಅಂಶಗಳ ಬಗ್ಗೆ ವಾರ್ಡ್ ಸಭೆಯು ಅಗತ್ಯ ಕ್ರಮವಹಿಸುವುದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.



Scanned by CamScanner

ದನಾರ್ಪಣಗಳೊಂದಿಗೆ ಸಂಚಾಲಕರು ಮತ್ತು ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.

(ಶ್ರೀ.ಕೆ.ದೇವೆಗೌಡ)
ಸಹಾಯಕ ಅಭಿಯಂತರರು
ಕಾರ್ಯದರ್ಶಿ ಹಾಗೂ ಸಂಚಾಲಕರು

(ಶ್ರೀಮತಿ ಆರ್.ಪ್ರಭಾವತಿ ರಮೇಶ್)
ಸದಸ್ಯರು, ವಾರ್ಡ್ ನಂ 187 ಪುಟ್ಟೇನಹಳ್ಳಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:-

ವಾರ್ಡ್ ಸಮಿತಿಯ ಸದಸ್ಯರುಗಳಿಗೆ.



Scanned by CamScanner

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಸ.ಕ.ಅ/ವಾರ್ಡ್ ಸಮಿತಿ/187/ಸಭೆ-3/ 2018-19 ದಿನಾಂಕ 01.01.2019.

## -: ಸಭಾ ಸೂಚನಾ ಪತ್ರ -3 :-

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಬೊಮ್ಮನಹಳ್ಳಿ ವಿಭಾಗ, ಅರಕೆರೆ ಉಪವಿಭಾಗ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ 187 ಪುಟ್ಟೇನಹಳ್ಳಿ ವಾರ್ಡ್ ಸದಸ್ಯರ ಕಛೇರಿಯಲ್ಲಿ ದಿನಾಂಕ 05.01.2019 ರಂದು ಬೆಳಗ್ಗೆ 11.00 ಘಂಟೆಗೆ ಮಾನ್ಯ ಪಾಲಿಕೆ ಸದಸ್ಯರ ಅಧ್ಯಕ್ಷತೆಯಲ್ಲಿ, ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ಸದರಿ ಸಭೆಗೆ ಎಲ್ಲಾ ಸಮಿತಿ ಸದಸ್ಯರು ಸಕಾಲದಲ್ಲಿ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಕೋರಿದೆ.

### -:ಅಜೆಂಡಾ:-

| | |
|---|---|
| ವಿಷಯ | 5. ಹಿಂದಿನ ಸಭೆಯ ನಡಾವಳಿಯನ್ನು ಓದಿ ರೆಕಾರ್ಡ್ ಮಾಡುವುದು. |
| ವಿಷಯ | 6. ವಾರ್ಡ್ ವ್ಯಾಪ್ತಿಯಲ್ಲಿ ನಾಮಫಲಕಗಳನ್ನು ಅಳವಡಿಸುವ / ಗುರುತಿಸುವ ಬಗ್ಗೆ. |
| ವಿಷಯ | 7. ಪುಟ್ಟೇನಹಳ್ಳಿ ವಾರ್ಡ್ ವ್ಯಾಪ್ತಿಯಲ್ಲಿ ಬರುವ ಪುಟ್ಟೇನಹಳ್ಳಿ ಬ್ಯಾಂಕ್ ಆಫ್ ಬರೋಡಾ, ಪುಟ್ಟೇನಹಳ್ಳಿ ಪಾಳ್ಯ, ಪಾಂಡುರಂಗ ನಗರ ಮತ್ತು ವಿವಿಧ ಪ್ರದೇಶಗಳಲ್ಲಿ ಘನ ತ್ಯಾಜ್ಯ ವಿಲೇವಾರಿ ಮಾಡುವ ಬಗ್ಗೆ ಮತ್ತು ಪೌರಕಾರ್ಮಿಕರನ್ನು ತೆಗೆದಿರುವ ಬಗ್ಗೆ. |
| ವಿಷಯ | 8. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಮನೆಗಳಿಗೆ ಬರುತ್ತಿರುವ ನೀರಿಗೆ ಬಿಲ್ ಮೊತ್ತವನ್ನು ಜಾಸ್ತಿ ಹಾಕುತ್ತಿರುವ ಬಗ್ಗೆ. |

ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸುವ ಇತರೆ ವಿಷಯಗಳ.

R. Prakash.
(ಮಾನ್ಯ ಸಮಿತಿ ಅಧ್ಯಕ್ಷರು ಹಾಗೂ
ಪಾಲಿಕೆ ಸದಸ್ಯರು ಆದೇಶದ ಮೇರೆಗೆ)

ಕಾರ್ಯದರ್ಶಿ ಹಾಗೂ ಸಂಚಾಲಕರು,
ವಾರ್ಡ್ ಸಮಿತಿ 187

Scanned by CamScanner

ಗೆ:-

| ಕ್ರ.ಸಂ | ಹೆಸರು | ಪದನಾಮ | ಸಹಿ |
|---|---|---|---|
| 1 | ಶ್ರೀಮತಿ.ಆರ್.ಪ್ರಭಾವತಿ ರಮೇಶ್, ಪಾಲಿಕೆ ಸದಸ್ಯರು. | ಅಧ್ಯಕ್ಷರು, | |
| 2 | ಶ್ರೀ.ಕೆ.ದೇವೇಗೌಡ, ಸಹಾಯಕ ಅಭಿಯಂತರರು | ಕಾರ್ಯದರ್ಶಿ ಹಾಗೂ ಸಂಚಾಲರು | |
| 3 | ಶ್ರೀಮತಿ ಆಂಜಿನಮ್ಮ | ಸಮಿತಿ ಸದಸ್ಯರು, | |
| 4 | ಶ್ರೀಮತಿ ಮಂಜುಳ | ಸಮಿತಿ ಸದಸ್ಯರು, | |
| 5 | ಶ್ರೀಮತಿ ತನುಜ. | ಸಮಿತಿ ಸದಸ್ಯರು, | |
| 6 | ಶ್ರೀಮತಿ ಲಕ್ಷ್ಮೀ ಕೆ | ಸಮಿತಿ ಸದಸ್ಯರು, | |
| 7 | ಶ್ರೀಮತಿ ಅನಿತ. | ಸಮಿತಿ ಸದಸ್ಯರು, | |
| 8 | ಶ್ರೀ ಸತೀಶ್ ಐತಾಳ್. | ಸಮಿತಿ ಸದಸ್ಯರು, | |
| 9 | ಶ್ರೀ ದೇವಿ. | ಸಮಿತಿ ಸದಸ್ಯರು, | |
| 10 | ಶ್ರೀ ಎಲ್.ರಮೇಶ್ . | ಸಮಿತಿ ಸದಸ್ಯರು, | |
| 11 | ಶ್ರೀ ರವಿ | ಸಮಿತಿ ಸದಸ್ಯರು, | |
| 12 | ಶ್ರೀ ನರಸಿಂಹ (ಬಾಬು) | ಸಮಿತಿ ಸದಸ್ಯರು, | |

Scanned by CamScanner